# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | | 30 |
| ಸದಸ್ಯರ ಹೆಸರು | | ಶ್ರೀ ತಳವಾರ ಸಾಬಣ್ಣ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | | 13.02.2023 |
| ಉತ್ತರಿಸುವ ಸಚಿವರು | | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಕ್ರ.ಸಂ | ಪ್ರಶ್ನೆ | ಉತ್ತರ |
| ಅ) | ರಾಜ್ಯದ ಸರ್ಕಾರಿ ಪ್ರಥಮ ದರ್ಜೆ/ಇನ್ನಿತರ ಕಾಲೇಜುಗಳಲ್ಲಿ ಪದವಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪದವಿ ವಿದ್ಯಾರ್ಥಿಗಳಿಗೆ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ಪಠ್ಯ ಪುಸ್ತಕಗಳನ್ನು ನಿಗಧಿಪಡಿಸಿರುವುದಿಲ್ಲ. ಬದಲಿಗೆ ಪರಾಮರ್ಶನ ಗ್ರಂಥಗಳ(Reference Book) ಪಟ್ಟಿ ನೀಡಲಾಗುತ್ತದೆ. ಉಳಿದಂತೆ ರಾಜ್ಯದ ಕೆಲವೊಂದು ವಿಶ್ವವಿದ್ಯಾಲಯಗಳಲ್ಲಿ ಭಾಷಾ ಪಠ್ಯ ಪುಸ್ತಕಗಳನ್ನು ಮುದ್ರಿಸಲಾಗುತ್ತಿದ್ದು, ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ PDF ಮಾದರಿಯಲ್ಲಿ e-book ಗಳನ್ನು ವಿಶ್ವವಿದ್ಯಾಲಯದ ವೆಬ್ ಸೈಟ್ ನಲ್ಲಿ ಪ್ರಚುರಪಡಿಸಲಾಗಿದ್ದು, ವಿದ್ಯಾರ್ಥಿಗಳು ಬಳಸುತ್ತಿದ್ದಾರೆ. ಭಾಷಾ ಪಠ್ಯ ಪುಸ್ತಕಗಳಿಗೆ ಕೊರತೆ ಬರದಂತೆ ಕ್ರಮ ವಹಿಸಲು ಈಗಾಗಲೇ ವಿಶ್ವವಿದ್ಯಾಲಯಗಳಿಗೆ ಸೂಚಿಸಲಾಗಿರುತ್ತದೆ. |
| ಆ) | ರಾಷ್ಟ್ರೀಯ ಶಿಕ್ಷಣ ನೀತಿ 2020 ಜಾರಿಗೊಳಿಸಿದ ನಂತರ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಪಠ್ಯಪುಸ್ತಕ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | 2022-23ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಂಗ್ರಹಿಸಲಾಗುವ ಸರ್ಕಾರಿ ಶುಲ್ಕಗಳು ಸೇರಿದಂತೆ, ಎಲ್ಲಾ ಶುಲ್ಕಗಳನ್ನು ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯಡಿ ಸಂಬಂಧಿಸಿದ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಪ್ರಾಂಶುಪಾಲರಿಗೆ ಅನುಮತಿ ನೀಡಲಾಗಿದೆ. ಎನ್.ಇ.ಪಿ ಹೊಸ ಮಾದರಿಯಲ್ಲಿ ಪರಾಮರ್ಶನ ಗ್ರಂಥಗಳನ್ನು (Reference Books) ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯಡಿಯಲ್ಲಿ (IDP) ಎಲ್ಲಾ ಕಾಲೇಜುಗಳಲ್ಲಿ ಅಗತ್ಯತೆಗಳಿಗೆ ಅನುಗುಣವಾಗಿ ಗ್ರಂಥಾಲಯಗಳಿಗೆ ಖರೀದಿ ಮಾಡಲಾಗುತ್ತಿದೆ.<br><br>ಸರ್ಕಾರದಿಂದ ಇಲಾಖೆಗೆ ಬಿಡುಗಡೆಗೊಂಡ ಕಛೇರಿ / ಇತರ ವೆಚ್ಚಗಳ ಅನುದಾನದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಪಠ್ಯ ಪುಸ್ತಕ /ಪಿಠೋಪಕರಣ/ಇತರೆ ವೆಚ್ಚಗಳಿಗಾಗಿ ನೀಡಲಾಗುತ್ತಿರುವ ಹಾಗೂ ರೂಸಾ ಯೋಜನೆಯಡಿಯಲ್ಲಿ ಒದಗಿಸುವ ಅನುದಾನದಲ್ಲಿ ಕಾಲೇಜು ಹಂತದಲ್ಲಿ ಅಗತ್ಯತೆಗೆ ತಕ್ಕಂತೆ ಎನ್.ಇ.ಪಿ ಹೊಸ ಮಾದರಿಯಲ್ಲಿ ಪರಾಮರ್ಶನ ಗ್ರಂಥಗಳನ್ನು (Reference Books) ಖರೀದಿ ಮಾಡಲಾಗುತ್ತಿರುತ್ತದೆ. |
| ಇ) | ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಪ್ರತಿ ವರ್ಷ ಪುಸ್ತಕಗಳನ್ನು ಒದಗಿಸಲು ಸರ್ಕಾರ ನೀಡಿರುವ ವಾರ್ಷಿಕ ಅನುದಾನ ಎಷ್ಟು; (ವಿವರ ನೀಡುವುದು). | ಉನ್ನತ ಶಿಕ್ಷಣ ಇಲಾಖೆಯಡಿಯ ಆಯವ್ಯಯ ಲೆಕ್ಕ ಶೀರ್ಷಿಕೆ 2202-03-103-2-01-051 ಇತರೆ ಸರ್ಕಾರಿ ಕಾಲೇಜುಗಳಡಿಯಲ್ಲಿ ಕಛೇರಿ/ಇತರೆ ವೆಚ್ಚಗಳ ಅನುದಾನದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಪಿಠೋಪಕರಣ/ ಕಛೇರಿ ಇತರೆ ವೆಚ್ಚಗಳು ಸೇರಿದಂತೆ ಆಕರ ಗ್ರಂಥಗಳಿಗೆ 2020-21ರಲ್ಲಿ ರೂ. 5.00 ಕೋಟಿಗಳನ್ನು, 2021-22ರಲ್ಲಿ ಮರು ಹೊಂದಾಣಿಕೆ ಮಾಡಿದ ಅನುದಾನವು ಸೇರಿ ರೂ. 15.0 ಕೋಟಿಗಳನ್ನು ಹಾಗೂ 2022-23ನೇ ಸಾಲಿಗೆ ರೂ. 4.50 ಕೋಟಿ ಅನುದಾನವನ್ನು ನೀಡಲಾಗಿರುತ್ತದೆ. ಅನುದಾನ ನೀಡಲಾಗುತ್ತಿದೆ. ಸದರಿ ಅನುದಾನವನ್ನು ಕಾಲೇಜು ಶಿಕ್ಷಣ ಇಲಾಖೆ, ಆಯುಕ್ತಾಲಯದ ಹಂತದಲ್ಲಿ ಅಗತ್ಯತೆಗೆ ತಕ್ಕಂತೆ ವೆಚ್ಚ ಮಾಡಲಾಗುತ್ತಿದೆ. |

ಈ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ತರಗತಿಗಳಿಗೆ ಡೆಸ್ಕ್‌ಗಳು, ಲ್ಯಾಬರೇಟರಿ ಸಲಕರಣೆಗಳನ್ನು ಒದಗಿಸಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು; ಸದರಿ ಸಲಕರಣೆಗಳನ್ನು ಒದಗಸಿಲು ಸರ್ಕಾರ ಕೈಗೊಂಡ ಕ್ರಮಗಳೇನು?

ಸರ್ಕಾರವು ಮೇಲ್ಕಂಡ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒದಗಿಸಿರುವ ಆಯವ್ಯಯದಿಂದ ಕಾಲಕಾಲಕ್ಕೆ ಬಿಡುಗಡೆಗೊಂಡ ಅನುದಾದಲ್ಲಿ (ಕಛೇರಿ ವೆಚ್ಚ ಮತ್ತು ಇತರೆ ವೆಚ್ಚಗಳಿಗಾಗಿ ಅಂದರೆ ಡೆಸ್ಕ್ ಖರೀದಿ, ಆಕರ ಗ್ರಂಥಗಳ ಖರೀದಿ ಇತ್ಯಾದಿ)ಕಾಲೇಜು ಶಿಕ್ಷಣ ಇಲಾಖೆ ಆಯುಕ್ತಾಲಯದಿಂದ ಎಲ್ಲಾ ಕಾಲೇಜುಗಳಿಗೆ ಅನುದಾನ ಒದಗಸಲಾಗುತ್ತಿದೆ. ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಸರ್ಕಾರಿ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗಗಳನ್ನು ತೆರೆಯುವ; ಕಾರ್ಯಕ್ರಮದಡಿಯಲ್ಲಿ ಲ್ಯಾಬರೇಟರಿ ಸಲಕರಣಗಳನ್ನು ಒದಗಿಸಲು 2020-21ನೇ ಶೈಕ್ಷಣಿಕ ಸಾಲಿಗೆ ರೂ. 1000.00 ಲಕ್ಷಗಳು, 2021-22ನೇ ಸಾಲಿಗೆ ರೂ.1000.00 ಲಕ್ಷಗಳು ಮತ್ತು 2022-23ನೇ ಸಾಲಿಗೆ ರೂ. 500.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ.

ಸಾಮರ್ಥ್ಯ ಸಾರಥ್ಯ ಕಾರ್ಯಕ್ರಮದಡಿ ರೂ 5.00 ಕೋಟಿಗಳನ್ನು ಆಕರ ಗ್ರಂಥಗಳ ಖರೀದಿಗಾಗಿ ಬಿಡುಗಡೆ ಮಾಡಿದ್ದು ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ. ಶೀಘ್ರದಲ್ಲಿ ಅಂತಿಮಗೊಳಿಸಿ, ಕಾಲೇಜುಗಳಿಗೆ ಒದಗಿಸಲಾಗುವುದು.

2022-23ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಂಗ್ರಹಿಸಲಾಗುವ ಸರ್ಕಾರಿ ಶುಲ್ಕಗಳು ಸೇರಿದಂತೆ ಎಲ್ಲಾ ಶುಲ್ಕಗಳನ್ನು ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯಡಿ ಕಾಲೇಜುಗಳಲ್ಲಿ ಅಗತ್ಯತೆಗನುಗುಣವಾಗಿ ಈ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಪ್ರಾಂಶುಪಾಲರುಗಳಿಗೆ ಅನುಮತಿ ನೀಡಲಾಗಿದೆ.

ಕೇಂದ್ರ ಪುರಸ್ಕೃತ 1.0 ಯೋಜನೆಯಡಿ 92 ಕಾಲೇಜುಗಳು ಹಾಗೂ ರೂಸಾ 2.0 ಯೋಜನೆಯಡಿ 30 ಕಾಲೇಜುಗಳ ಒಟ್ಟು 122 ಕಾಲೇಜುಗಳು ಆಯ್ಕೆಯಾಗಿದ್ದು, ಸದರಿ ಕಾಲೇಜುಗಳ ಅನುಮೋದಿನ ಸಾಂಸ್ಥಿಕ ಅಭಿವೃದ್ಧಿ ಯೋಜನೆ (IDP) ಪ್ರಕರ ನೂತನ ಉಪಕರಣಗಳಡಿ ಕ್ರೀಡಾ ಉಪಕರಣಗಳು, ಪೀಠೋಪಕರಣಗಳು, ವಿಜ್ಞಾನ ಪ್ರಯೋಗಾಲಯ ಉಪಕರಣಗಳು ಹಾಗೂ ಲ್ಯಾಪ್‌ಟಾಪ್, ಡೆಸ್ಕ್‌ಟಾಪ್ ಯುಪಿಎಸ್ (ಐಸಿಟಿ ಉಪಕರಣಗಳು) ಖರೀದಿಗೆ ರೂಸಾ 1.0 ಯೋಜನೆಯಡಿ ರೂ. 2906.73 ಲಕ್ಷಗಳು ಹಾಗೂ ರೂಸಾ 2.0 ಯೋಜನೆಯಡಿ ರೂ 1236.00 ಲಕ್ಷಗಳು ಒಟ್ಟು ರೂ. 4142.73 ಲಕ್ಷಗಳು ಹಂಚಿಕೆಯಾಗಿರುತ್ತದೆ. ಸದರಿ ಉಪಕರಣಗಳ ಖರೀದಿಗೆ ಈ ಟೆಂಡರ್ ಪ್ರಕ್ರೀಯೆ ಚಾಲ್ತಿಯಲ್ಲಿರುತ್ತದೆ.

ಇದಲ್ಲದೆ 2022-23 ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಮೆಗಾ ಯೋಜನೆಯಡಿ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಸರ್ಕಾರಿ ಕಾಲೇಜುಗಳನ್ನು ಮೇಲ್ದರ್ಜೆಗೇರಿಸಲು ಹಾಗೂ ಶೈಕ್ಷಣಿಕ ಸೌಲಭ್ಯ ಒಳಗೊಂಡಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕ್ರೀಯಾ ಯೋಜನೆಗೆ ಈ ಕೆಳಕಂಡಂತೆ ಮಂಜೂರಾತಿ ನೀಡಿದೆ.

| ಕ್ರ.ಸಂ | ಜಿಲ್ಲೆಯ ಹೆಸರು | ಉಪ ಯೋಜನೆ | ನಿಗಧಿಪಡಿಸಿದ ಅನುದಾನ ರೂ.ಗಳು | ಮಂಜೂರಾತಿ ನೀಡಿದ ರೂ.ಗಳು | ಬಾಕಿ ಅನುದಾನ ರೂ.ಗಳು. |
|---|---|---|---|---|---|
| 1 | ವಿಜಯ ನಗರ | ಎಸ್.ಸಿ.ಪಿ | 338.00 | 197.82 | 140.08 |
| | | ಟಿ.ಎಸ್.ಪಿ | 77.00 | 43.96 | 33.04 |
| | | ಸಾಮಾನ್ಯ | 1465.00 | 857.22 | 607.78 |
| 2 | ದಾವಣಗೆರೆ | ಎಸ್.ಸಿ.ಪಿ | 363.00 | 363.42 | 0.00 |
| | | ಟಿ.ಎಸ್.ಪಿ | 82.00 | 82.00 | 0.00 |
| | | ಸಾಮಾನ್ಯ | 1573.00 | 1573.058 | 0.00 |
| 3 | ರಾಯಚೂರು | ಎಸ್.ಸಿ.ಪಿ | 558.00 | 558.00 | 0.00 |
| | | ಟಿ.ಎಸ್.ಪಿ | 126.00 | 126.00 | 0.00 |
| | | ಸಾಮಾನ್ಯ | 2416.00 | 2416.00 | 0.00 |
| 4 | ಕೊಪ್ಪಳ | ಎಸ್.ಸಿ.ಪಿ | 356.00 | 356.00 | 0.00 |

| | | | | | | | | |
|---|---|---|---|---|---|---|---|---|
| | | | | | ಟಿ.ಎಸ್.ಪಿ | 81.00 | 81.00 | 0.00 |
| | | | | | ಸಾಮಾನ್ಯ | 1542.00 | 1542.00 | 0.00 |
| | | | 5 | ಕಲಬುರಗಿ | ಎಸ್.ಸಿ.ಪಿ | 871.00 | 828.88 | 42.12 |
| | | | | | ಟಿ.ಎಸ್.ಪಿ | 197.00 | 187.47 | 9.53 |
| | | | | | ಸಾಮಾನ್ಯ | 3771.00 | 3587.10 | 183.90 |
| | | | 6 | ಬಳ್ಳಾರಿ | ಎಸ್.ಸಿ.ಪಿ | 176.00 | 175.54 | 0.46 |
| | | | | | ಟಿ.ಎಸ್.ಪಿ | 40.00 | 39.85 | 0.15 |
| | | | | | ಸಾಮಾನ್ಯ | 764.00 | 710.61 | 53.39 |
| | | | 7 | ಬೀದರ್ | ಎಸ್.ಸಿ.ಪಿ | 464.00 | 464.00 | 0.00 |
| | | | | | ಟಿ.ಎಸ್.ಪಿ | 105.00 | 105.00 | 0.00 |
| | | | | | ಸಾಮಾನ್ಯ | 2009.00 | 2009.00 | 0.00 |
| | | | **ಒಟ್ಟು** | | | **17374.00** | **16303.93** | **1070.45** |

ಸಂಖ್ಯೆ: ಇಡಿ 20 ಯುಎನ್ಇ 2023

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು
ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು
ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು.

STD
13-2-23

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಳವಾರ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 30ಕ್ಕೆ ಪೂರಕ ಟಿಪ್ಪಣಿ.**

1. ರಾಜ್ಯದ ಸರ್ಕಾರಿ ಪ್ರಥಮ ದರ್ಜೆ/ಇನ್ನಿತರ ಕಾಲೇಜುಗಳ ಪದವಿ ವಿದ್ಯಾರ್ಥಿಗಳಿಗೆ ಭಾಷಾ ಪಠ್ಯಪುಸ್ತಕಗಳನ್ನು ಕೆಲವೊಂದು ವಿಶ್ವವಿದ್ಯಾಲಯಗಳಲ್ಲಿ ಮುದ್ರಿಸಲಾಗುತ್ತಿದ್ದು, ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾಲಯಗಳಲ್ಲಿ ಭಾಷಾ ಪಠ್ಯಪುಸ್ತಕಗಳ ಕೊರತೆಯಿರುವುದು ಕಂಡುಬಂದಿದ್ದು, ಈ ಎರಡು ವಿಶ್ವವಿದ್ಯಾಲಯಗಳು ಹಂತ ಹಂತವಾಗಿ ಪಠ್ಯಪುಸ್ತಕಗಳ ವಿತರಣೆಗೆ ಕ್ರಮವಹಿಸಿರುತ್ತವೆ.

2. 2022-23ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಂಗ್ರಹಿಸಲಾಗುವ ಸರ್ಕಾರಿ ಶುಲ್ಕಗಳು ಸೇರಿದಂತೆ, ಎಲ್ಲಾ ಶುಲ್ಕಗಳನ್ನು ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯಡಿ ಸಂಬಂಧಿಸಿದ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಪ್ರಾಂಶುಪಾಲರಿಗೆ ಅನುಮತಿ ನೀಡಲಾಗಿದೆ. ಎನ್.ಇ.ಪಿ ಹೊಸ ಮಾದರಿಯಲ್ಲಿ ಪರಾಮರ್ಶನ ಗ್ರಂಥಗಳನ್ನು (Reference Books) ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯಡಿಯಲ್ಲಿ (IDP) ಎಲ್ಲಾ ಕಾಲೇಜುಗಳಲ್ಲಿ ಅಗತ್ಯತೆಗಳಿಗೆ ಅನುಗುಣವಾಗಿ ಗ್ರಂಥಾಲಯಗಳಿಗೆ ಖರೀದಿ ಮಾಡಲಾಗುತ್ತಿದೆ.

   ಸರ್ಕಾರದಿಂದ ಇಲಾಖೆಗೆ ಬಿಡುಗಡೆಗೊಂಡ ಕಛೇರಿ / ಇತರೆ ವೆಚ್ಚಗಳ ಅನುದಾನದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಪಠ್ಯಪುಸ್ತಕ /ಪೀಠೋಪಕರಣ/ಇತರೆ ವೆಚ್ಚಗಳಿಗಾಗಿ ನೀಡಲಾಗುತ್ತಿರುವ ಹಾಗೂ ರೂಸಾ ಯೋಜನೆಯಡಿಯಲ್ಲಿ ಒದಗಿಸುವ ಅನದಾನದಲ್ಲಿ ಕಾಲೇಜು ಹಂತದಲ್ಲಿ ಅಗತ್ಯತೆಗೆ ತಕ್ಕಂತೆ ಎನ್.ಇ.ಪಿ ಹೊಸ ಮಾದರಿಯಲ್ಲಿ ಪರಾಮರ್ಶನ ಗ್ರಂಥಗಳನ್ನು (Reference Books) ಖರೀದಿ ಮಾಡಲಾಗುತ್ತಿರುತ್ತದೆ.

3. ಸರ್ಕಾರಿ ಪ್ರಥಮ ದರ್ಜೆ ಕಾಲೇಜಗಳಿಗೆ ಆಕರ ಗ್ರಂಥಗಳನ್ನು ಒದಗಸಲು ಪ್ರತ್ಯೇಕ ಅನುದಾನ ಒದಗಿಸಿರುವುದಿಲ್ಲ. ಆದರೆ, ಉನ್ನತ ಶಿಕ್ಷಣ ಇಲಾಖೆಯಡಿಯ ಆಯವ್ಯಯ ಲೆಕ್ಕ ಶೀರ್ಷಿಕೆ 2202-03-103-2-01-051 ಇತರೆ ಸರ್ಕಾರಿ ಕಾಲೇಜುಗಳಡಿಯಲ್ಲಿ ಕಛೇರಿ/ಇತರೆ ವೆಚ್ಚಗಳ ಅನುದಾನದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಪೀಠೋಪಕರಣ/ ಕಛೇರಿ ಇತರೆ ವೆಚ್ಚಗಳು ಸೇರಿದಂತೆ ಆಕರ ಗ್ರಂಥಗಳಿಗೆ 2020-21ರಲ್ಲಿ ರೂ. 5.00 ಕೋಟಿಗಳನ್ನು, 2021-22ರಲ್ಲಿ ಮರು ಹೊಂದಾಣಿಕೆ ಮಾಡಿದ ಅನುದಾನವು ಸೇರಿ ರೂ. 15.0 ಕೋಟಿಗಳನ್ನು ಹಾಗೂ 2022-23ನೇ ಸಾಲಿಗೆ ರೂ. 4.50 ಕೋಟಿ ಅನುದಾನವನ್ನು ನೀಡಲಾಗಿರುತ್ತದೆ. ಅನುದಾನ ನೀಡಲಾಗುತ್ತಿದೆ. ಸದರಿ ಅನುದಾನವನ್ನು ಕಾಲೇಜು ಶಿಕ್ಷಣ ಇಲಾಖೆ, ಆಯುಕ್ತಾಲಯದ ಹಂತದಲ್ಲಿ ಅಗತ್ಯತೆಗೆ ತಕ್ಕಂತೆ ವೆಚ್ಚ ಮಾಡಲಾಗುತ್ತಿದೆ.

4. ಸರ್ಕಾರವು ಮೇಲ್ಕಂಡ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒದಗಿಸಿರುವ ಆಯವ್ಯಯದಿಂದ ಕಾಲಕಾಲಕ್ಕೆ ಬಿಡುಗಡೆಗೊಂಡ ಅನುದಾದಲ್ಲಿ (ಕಛೇರಿ ವೆಚ್ಚ ಮತ್ತು ಇತರೆ ವೆಚ್ಚಗಳಿಗಾಗಿ ಅಂದರೆ ಡೆಸ್ಕ್ ಖರೀದಿ, ಆಕರ ಗ್ರಂಥಗಳ ಖರೀದಿ ಇತ್ಯಾದಿ)ಕಾಲೇಜು ಶಿಕ್ಷಣ ಇಲಾಖೆ ಆಯುಕ್ತಾಲಯದಿಂದ ಎಲ್ಲಾ ಕಾಲೇಜುಗಳಿಗೆ ಅನುದಾನ ಒದಗಸಲಾಗುತ್ತಿದೆ. ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಸರ್ಕಾರಿ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗಗಳನ್ನು ತೆರೆಯುವ ಕಾರ್ಯಕ್ರಮದಡಿಯಲ್ಲಿ ಲ್ಯಾಬರೇಟರಿ ಸಲಕರಣಗಳನ್ನು ಒದಗಿಸಲು 2020-21ನೇ ಶೈಕ್ಷಣಿಕ ಸಾಲಿಗೆ ರೂ. 1000.00 ಲಕ್ಷಗಳು, 2021-22ನೇ ಸಾಲಿಗೆ ರೂ.1000.00 ಲಕ್ಷಗಳು ಮತ್ತು 2022-23ನೇ ಸಾಲಿಗೆ ರೂ. 500.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ.

5. 2022-23ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಂಗ್ರಹಿಸಲಾಗುವ ಸರ್ಕಾರಿ ಶುಲ್ಕಗಳು ಸೇರಿದಂತೆ ಎಲ್ಲಾ ಶುಲ್ಕಗಳನ್ನು ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯಡಿ (IDP) ಕಾಲೇಜುಗಳಲ್ಲಿ ಅಗತ್ಯತೆಗನುಗುಣವಾಗಿ ಈ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಪ್ರಾಂಶುಪಾಲರುಗಳಿಗೆ ಅನುಮತಿ ನೀಡಲಾಗಿದೆ. ಪ್ರಸ್ತುತ ಇಲಾಖೆಯ ವಿವಿಧ ಪ್ರಥಮ ದರ್ಜೆ ಕಾಲೇಜುಗಳಿಗೆ ವರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯಡಿ (IDP) ರೂ.619488633.00 ಗಳನ್ನು ಅನುಮೋದನೆ ನೀಡಲಾಗಿರುತ್ತದೆ. ಸದರಿ

ಅನುಮೋದಿತ (IDP)ಯಲ್ಲಿ ಪದವಿ ಕಾಲೇಜುಗಳ ಗ್ರಂಥಾಲಯಗಳಿಗೆ ಪರಾಮರ್ಶನ ಗ್ರಂಥಗಳ (Reference Books) ಖರೀದಿಯೂ ಒಳಗೊಂಡಿರುತ್ತದೆ.

6. ಪ್ರಸ್ತುತ ಸಾಲಿನಲ್ಲಿ ಕಾಲೇಜುಗಳಿಗೆ ಉಪಕರಣಗಳು ಮತ್ತು ಇತರೆ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲು ರೂ.65.00 ಕೋಟಿ ಒದಗಿಸಿದ್ದು, ಟೆಂಡರ್ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.
7. ಆಯವ್ಯಯ ಘೋಷಿತ ಸಾಮರ್ಥ್ಯ ಸಾರಥ್ಯ ಕಾರ್ಯಕ್ರಮದಡಿ ರೂ 5.00 ಕೋಟಿಗಳನ್ನು ಆಕರ ಗ್ರಂಥಗಳ ಖರೀದಿಗಾಗಿ ಬಿಡುಗಡೆ ಮಾಡಿದ್ದು ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.
8. 2022-23ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಂಗ್ರಹಿಸಲಾಗುವ ಸರ್ಕಾರಿ ಶುಲ್ಕಗಳು ಸೇರಿದಂತೆ ಎಲ್ಲಾ ಶುಲ್ಕಗಳನ್ನು ವಾರ್ಷಿಕ ಸಾಂಸ್ಥಿಕ ಅಭಿವೃದ್ಧಿ ಯೋಜನೆಯಡಿ ಕಾಲೇಜುಗಳಲ್ಲಿ ಅಗತ್ಯತೆಗನುಗುಣವಾಗಿ ಈ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಪ್ರಾಂಶುಪಾಲರುಗಳಿಗೆ ಅನುಮತಿ ನೀಡಲಾಗಿದೆ.
9. ಕೇಂದ್ರ ಪುರಸ್ಕೃತ 1.0 ಯೋಜನೆಯಡಿ 92 ಕಾಲೇಜುಗಳು ಹಾಗೂ ರೂಸಾ 2.0 ಯೋಜನೆಯಡಿ 30 ಕಾಲೇಜುಗಳ ಒಟ್ಟು 122 ಕಾಲೇಜುಗಳು ಆಯ್ಕೆಯಾಗಿದ್ದು, ಸದರಿ ಕಾಲೇಜುಗಳ ಅನುಮೋದಿತ ಸಾಂಸ್ಥಿಕ ಅಭಿವೃದ್ಧಿ ಯೋಜನೆ (IDP) ಪ್ರಕಾರ ನೂತನ ಉಪಕರಣಗಳಡಿ ಕ್ರೀಡಾ ಉಪಕರಣಗಳು, ಪೀಠೋಪಕರಣಗಳು, ವಿಜ್ಞಾನ ಪ್ರಯೋಗಾಲಯ ಉಪಕರಣಗಳು ಹಾಗೂ ಲ್ಯಾಪ್‌ಟಾಪ್, ಡೆಸ್ಕ್ ಟಾಪ್ ಯುಪಿಎಸ್ (ಐಸಿಟಿ ಉಪಕರಣಗಳು) ಖರೀದಿಗೆ ರೂಸಾ 1.0 ಯೋಜನೆಯಡಿ ರೂ. 2906.73 ಲಕ್ಷಗಳು ಹಾಗೂ ರೂಸಾ 2.0 ಯೋಜನೆಯಡಿ ರೂ 1236.00 ಲಕ್ಷಗಳು ಒಟ್ಟು ರೂ. 4142.73 ಲಕ್ಷಗಳು ಹಂಚಿಕೆಯಾಗಿರುತ್ತದೆ. ಸದರಿ ಉಪಕರಣಗಳ ಖರೀದಿಗೆ ಈ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.
10. 2022-23 ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಮೇಲ್ದರ್ಜೆಗೆ ಏರಿಸುವ ಸಂಬಂಧ ರೂ.173.76 ಕೋಟಿಗಳ ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆ. ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಸರ್ಕಾರಿ ಕಾಲೇಜುಗಳಲ್ಲಿ ಶೈಕ್ಷಣಿಕ ಸೌಲಭ್ಯ ಒಳಗೊಂಡಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕ್ರಿಯಾ ಯೋಜನೆಗೆ ಈ ಕೆಳಕಂಡಂತೆ ಮಂಜೂರಾತಿ ನೀಡಿದೆ.

| ಕ್ರ.ಸಂ | ಜಿಲ್ಲೆಯ ಹೆಸರು | ಉಪ ಯೋಜನೆ | ನಿಗಧಿಪಡಿಸಿದ ಅನುದಾನ ರೂ.ಗಳು | ಮಂಜೂರಾತಿ ನೀಡಿದ ರೂ.ಗಳು | ಬಾಕಿ ಅನುದಾನ ರೂ.ಗಳು. |
|---|---|---|---|---|---|
| 1 | ವಿಜಯ ನಗರ | ಎಸ್.ಸಿ.ಪಿ | 338.00 | 197.82 | 140.08 |
| | | ಟಿ.ಎಸ್.ಪಿ | 77.00 | 43.96 | 33.04 |
| | | ಸಾಮಾನ್ಯ | 1465.00 | 857.22 | 607.78 |
| 2 | ದಾವಣಗೆರೆ | ಎಸ್.ಸಿ.ಪಿ | 363.00 | 363.42 | 0.00 |
| | | ಟಿ.ಎಸ್.ಪಿ | 82.00 | 82.00 | 0.00 |
| | | ಸಾಮಾನ್ಯ | 1573.00 | 1573.058 | 0.00 |
| 3 | ರಾಯಚೂರು | ಎಸ್.ಸಿ.ಪಿ | 558.00 | 558.00 | 0.00 |
| | | ಟಿ.ಎಸ್.ಪಿ | 126.00 | 126.00 | 0.00 |
| | | ಸಾಮಾನ್ಯ | 2416.00 | 2416.00 | 0.00 |
| 4 | ಕೊಪ್ಪಳ | ಎಸ್.ಸಿ.ಪಿ | 356.00 | 356.00 | 0.00 |
| | | ಟಿ.ಎಸ್.ಪಿ | 81.00 | 81.00 | 0.00 |
| | | ಸಾಮಾನ್ಯ | 1542.00 | 1542.00 | 0.00 |

| | | | | | |
|---|---|---|---|---|---|
| 5 | ಕಲಬುರಗಿ | ಎಸ್.ಸಿ.ಪಿ | 871.00 | 828.88 | 42.12 |
| | | ಟಿ.ಎಸ್.ಪಿ | 197.00 | 187.47 | 9.53 |
| | | ಸಾಮಾನ್ಯ | 3771.00 | 3587.10 | 183.90 |
| 6 | ಬಳ್ಳಾರಿ | ಎಸ್.ಸಿ.ಪಿ | 176.00 | 175.54 | 0.46 |
| | | ಟಿ.ಎಸ್.ಪಿ | 40.00 | 39.85 | 0.15 |
| | | ಸಾಮಾನ್ಯ | 764.00 | 710.61 | 53.39 |
| 7 | ಬೀದರ್ | ಎಸ್.ಸಿ.ಪಿ | 464.00 | 464.00 | 0.00 |
| | | ಟಿ.ಎಸ್.ಪಿ | 105.00 | 105.00 | 0.00 |
| | | ಸಾಮಾನ್ಯ | 2009.00 | 2009.00 | 0.00 |
| **ಒಟ್ಟು** | | | **17374.00** | **16303.93** | **1070.45** |

************************